# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ವಿಧಾನಪರಿಷತ್ತು ಸದಸ್ಯರ ಹೆಸರು | : | ಶ್ರೀ. ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 603 (743) |
| ಉತ್ತರಿಸಬೇಕಾದ ದಿನಾಂಕ | : | 18.08.2025 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ CRZ 2019 ನಿಯಾಮವಳಿಯಂತೆ ಕುದ್ರು ಪ್ರದೇಶದಲ್ಲಿ ಕರಾವಳಿ ನಿಯಂತ್ರಣ ವಲಯ ಎಷ್ಟು ಮೀಟರ್‌ವರೆಗೆ ಇರುತ್ತದೆ: ರಾಜ್ಯದ ಕರಾವಳಿ ತೀರದಲ್ಲಿ ಕುದ್ರು (ದ್ವೀಪ) ಪ್ರದೇಶದಲ್ಲಿ ನೆಲೆಸಿರುವ ಮೂಲ ನಿವಾಸಿಗಳಿಗೆ ಮನೆ ನಿರ್ಮಾಣ ಮಾಡಲು ಅನುಸರಿಸಬೇಕಾದ ಕ್ರಮಗಳು ಯಾವುವು: | ಕುದ್ರು (ದ್ವೀಪ) ಪ್ರದೇಶದಲ್ಲಿ ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಯು ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2019 ರ 10.2 (iii) ರನ್ವಯ ಸಮಗ್ರ ದ್ವೀಪ ನಿರ್ವಹಣಾ ಯೋಜನೆ (Integrated Island Management Plan)ಯನ್ನು ರೂಪಿಸುವವರೆಗೆ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ರ ಪ್ಯಾರಾ 1(i) ರ ಅನುಸಾರ ಸಮುದ್ರ ಭರತ ರೇಖೆಯಿಂದ 500 ಮೀಟರ್‌ವರೆಗೆ ಹಾಗೂ ಪ್ಯಾರಾ 1(ii) ಕಡಲಿಗೆ ಕೂಡಿದ ಉಬ್ಬರ ವಿಳಿತ ಪ್ರಭಾವಕ್ಕೆ ಒಳಪಟ್ಟ ಜಲಮೂಲಗಳ ಉದ್ದಕ್ಕೂ HTL ಯಿಂದ ಭೂಮುಖವಾಗಿ 100 ಮೀಟರ್‌ಗಳವರೆಗೆ ಅಥವಾ ತೊರೆ (ಕ್ರಿಕ್ಸ್) ಅಗಲಕ್ಕೆ, ಇವುಗಳಲ್ಲಿ ಯಾವುದರ ವಿಸ್ತಾರ ಕಡಿಮೆ ಇರುತ್ತದೆಯೋ ಆ ಭೂ-ಪ್ರದೇಶದ ವ್ಯಾಪ್ತಿಯವರೆಗೆ ಅನ್ವಯಿಸುತ್ತದೆ.<br><br>ಸಮಗ್ರ ದ್ವೀಪ ನಿರ್ವಹಣಾ ಯೋಜನೆಯು ಅಂತಿಮಗೊಂಡ ನಂತರ ಕುದ್ರು ದ್ವೀಪ ಪ್ರದೇಶಗಳಲ್ಲಿ ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಯು 20 ಮೀಟರ್‌ಗೆ ನಿಗದಿಯಾಗುತ್ತದೆ.<br><br>ಕರಾವಳಿ ತೀರದಲ್ಲಿ ಕುದ್ರು (ದ್ವೀಪ) ಪ್ರದೇಶದಲ್ಲಿ ನೆಲೆಸಿರುವ ಮೂಲ ನಿವಾಸಿಗಳು ಮನೆ ನಿರ್ಮಾಣ ಮಾಡಲು ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರ ಪಡೆಯಲು ಪ್ರಕ್ರಿಯೆಯನ್ನು 2024ರ ನಂತರ ಆನ್‌ಲೈನ್ PARIVESH 2.0 Portal ಮುಖಾಂತರ ಅರ್ಜಿ ಸಲ್ಲಿಸಿ, ಸದರಿ ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ (KSCZMA)ದಿಂದ ನಿರಾಕ್ಷೇಪಣಾ ಪತ್ರ ಪಡೆಯಬಹುದಾಗಿದೆ. |
| ಆ) | ರಾಜ್ಯದ ಕರಾವಳಿ ತೀರದಲ್ಲಿ ಜನ ಸಾಮಾನ್ಯರು CRZ ನಿಯಮದಿಂದ ಹಲವಾರು ಸಮಸ್ಯೆಗಳನ್ನು ಅನುಭವಿಸುತ್ತಿದ್ದು, ಅದರಲ್ಲೂ ಕುದ್ರು (ದ್ವೀಪ) ಪ್ರದೇಶದಲ್ಲಿ ನೆಲೆಸಿರುವ ಮೂಲ ನಿವಾಸಿಗಳಿಗೆ ತಮ್ಮ ಊರಿನಲ್ಲಿಯೇ ಮನೆ ನಿರ್ಮಾಣ ಮಾಡುವುದು | ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಯಲ್ಲಿ ವಾಸಿಸುವ ಜನರು ಅಭಿವೃದ್ಧಿ ಚಟುವಟಿಕೆಯನ್ನು ಕೈಗೊಳ್ಳಲು ಪೂರಕವಾಗಿ ಕೇಂದ್ರ ಸರ್ಕಾರವು 2024ರ ನಂತರ ಆನ್‌ಲೈನ್ PARIVESH 2.0 Portal ಅನ್ನು ಜಾರಿಗೊಳಿಸಿದ್ದು, ಅರ್ಜಿದಾರರು ವಾಸ್ತವ್ಯದ ಮನೆ ನಿರ್ಮಾಣ ಹಾಗೂ ಇತರ ಚಟುವಟಿಕೆ ಕೈಗೊಳ್ಳಲು ಸದರಿ ಪೋರ್ಟಲ್‌ನಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಬೇಕಾಗಿದೆ. ಸದರಿ ಪೋರ್ಟಲ್‌ನಲ್ಲಿ ಸ್ವೀಕೃತವಾದ ಅರ್ಜಿಯನ್ನು KSCZMA |

| | | |
|---|---|---|
| | ಕಷ್ಟಸಾಧ್ಯವಾಗಿರುವ ಬಗ್ಗೆ ಸರ್ಕಾರ ಏನು ಕ್ರಮವಹಿಸಿದೆ: | ಸಭೆಯಲ್ಲಿ ಪರಿಶೀಲನೆ ನಡೆಸಿ, ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರವನ್ನು ನೀಡಲಾಗುತ್ತದೆ. ನಂತರ CRZ-2019 ಅಧಿಸೂಚನೆ ಅನುಸಾರ ಅಭಿವೃದ್ಧಿ ಚಟುವಟಿಕೆ / ಮನೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿರುತ್ತದೆ. |
| ಇ) | ಪರಿಸರ ಇಲಾಖೆಯಿಂದ ಈಗಾಗಲೇ (IIMP) Integrated Island Management Plan ರೂಪಿಸಿ ಕೇಂದ್ರ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆಯೇ; ಇಲ್ಲದಿದ್ದಲ್ಲಿ ಯಾವಾಗ ಸಲ್ಲಿಸಲು ಕ್ರಮವಹಿಸಲಾಗುವುದು; | ಕೇಂದ್ರ ಸರ್ಕಾರವು 10 ಹೆಕ್ಟೇರ್‌ಗಿಂತ ಕಡಿಮೆ ವಿಸ್ತೀರ್ಣ ಹೊಂದಿರುವ ಸಣ್ಣ ದ್ವೀಪಗಳ ಸಮಗ್ರ ದ್ವೀಪ ನಿರ್ವಹಣಾ ಯೋಜನೆಗಳ Integrated Island Management Plan (IIMP) ಕರಡು ಸಾಮಾನ್ಯ ಮಾರ್ಗಸೂಚಿಯನ್ನು ಸಿದ್ಧಪಡಿಸಿದ್ದು, ಸದರಿ ಮಾರ್ಗಸೂಚಿಯು ಅಂತಿಮಗೊಂಡಿರುವುದಿಲ್ಲ. |
| ಈ) | ಕರ್ನಾಟಕ ರಾಜ್ಯದಲ್ಲಿ CRZ 2019 ನಿಯಮಾವಳಿಗಳನ್ನು ರಚಿಸಲಾಗಿದ್ದರೂ ಈವರೆಗೆ IIMP ರಚಿಸದಿರಲು ಕಾರಣವೇನು: ಕೇಂದ್ರ ಸರ್ಕಾರದ ಪರಿಸರ ಮಂತ್ರಾಲಯಕ್ಕೆ ಈ ಕುರಿತ ನಿಯಮಗಳ ಸರಳೀಕರಣ ಮಾಡಲು ಯಾವ ರೀತಿ ಕ್ರಮವಹಿಸಲಾಗಿದೆ: | ಕೇಂದ್ರ ಸರ್ಕಾರವು CRZ 2019 ನಿಯಮಾವಳಿಗಳನ್ವಯ IIMP ಕರಡು ಸಾಮಾನ್ಯ ಮಾರ್ಗಸೂಚಿಯನ್ನು ಸಿದ್ಧಪಡಿಸಿದ್ದು, ಸದರಿ ಮಾರ್ಗಸೂಚಿಯು ಅಂತಿಮಗೊಂಡಿರುವುದಿಲ್ಲ.<br><br>ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2019ರ ಪ್ಯಾರಾ 7(vi) ಅನುಸಾರ ಅಧಿಸೂಚನೆಯ ನಿಯಮಗಳಿಗೆ ಒಳಪಡುವ ಪ್ರದೇಶಗಳಲ್ಲಿ ಸ್ವಂತ ವಾಸ್ತವ್ಯದ ಕಟ್ಟಡ ನಿರ್ಮಾಣಕ್ಕೆ ಸ್ಥಳೀಯ ಪ್ರಾಧಿಕಾರಗಳಿಂದ NOC ನೀಡುವ ಕುರಿತು ಅಧಿಸೂಚನೆ 2019ರ ಪ್ಯಾರಾ 7(vi)ರಲ್ಲಿನ ನಿಯಮಗಳಂತೆ ವಿವರವಾದ ಕರಡು ವರದಿಯನ್ನು ಸಲ್ಲಿಸುವಂತೆ ಪ್ರಾದೇಶಿಕ ನಿರ್ದೇಶಕರು (ಪರಿಸರ), ಮಂಗಳೂರು, ಉಡುಪಿ ಮತ್ತು ಕಾರವಾರ ಇವರುಗಳಿಂದ ವರದಿ ಕೋರಲಾಗಿದೆ.<br><br>ಅದರನ್ವಯ, ವರದಿ ಸ್ವೀಕೃತವಾದ ನಂತರ ರಾಜ್ಯ ಕಲತೀರ ನಿರ್ವಹಣಾ ವಲಯ ಪ್ರಾಧಿಕಾರದ ವತಿಯಿಂದ ಪರಿಶೀಲಿಸಲಾಗುತ್ತದೆ. |
| ಉ) | IIMP ರಚಿಸುವವರೆಗೆ ಕುದ್ರುಗಳ ಮೂಲ ನಿವಾಸಿಗಳಿಗೆ ಮನೆ ನಿರ್ಮಾಣ ಮಾಡುವ ಕುರಿತು ಏನು ಪರ್ಯಾಯ ಕ್ರಮಗಳನ್ನು ಸರ್ಕಾರ ರೂಪಿಸಿದೆಯೇ? | ಕರಾವಳಿ ತೀರದಲ್ಲಿ ಕುದ್ರು (ದ್ವೀಪ) ಪ್ರದೇಶದಲ್ಲಿ ನೆಲೆಸಿರುವ ಮೂಲ ನಿವಾಸಿಗಳು ಮನೆ ನಿರ್ಮಾಣ ಮಾಡಲು ಕೇಂದ್ರ ಸರ್ಕಾರದ PARIVESH 2.0 Portal ಮುಖಾಂತರ ಅರ್ಜಿ ಸಲ್ಲಿಸಿ, ಸದರಿ ಪ್ರಸ್ತಾವನೆಗೆ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದಿಂದ ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರ ಪಡೆಯಬಹುದಾಗಿದೆ. |

**ಸಂಖ್ಯೆ:** ಅಪಜೀ 167 ಇಎನ್‌ವಿ 2025

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.